RegdNo B G155 Sri (129) 2 13—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರಮನೆಸಿಂಸ್ಕೇದಾರ್ ಎಂ ವಿ ಸುಬ್ಬರಾಯರು ಸಂಪಾದಕರು — ಧರ್ಮಪ್ರಚಾರನಿರತ ಎಂ'ಎಸ್ ಕೃಷ್ಣರಾವ್ 2

ಟೇಬಲು ಮೇಲೆ ಸಿಂಹ

ಬೈಸಿಯಾ— ಇಲ್ಲಿಗೆ ಸ್ವಲ್ಪ ದೂರದಲ್ಲಿ ನಡೆಯುತ್ತಿದ್ದ ಸರ್ಕಸ್ಸಿನಿಂದ ತಪ್ಪಿಸಿಕೊಂಡ ಬಂದ ಒಂದು ಸಿಂಹವು ಅಂಗಡಿಲೊ ಗಾಬರಿನ ವಸಿಗೆ ಕಿಟಕಿಯಿಂದ ಹಾರಿ ಬಂದು ಟೇಬಲಿನ ಮೇಲೆ ವಲಗಿತ್ತು ; ಅವನು ಬಂದು ನೋಡಿ ಹೆದರಿ ಬಾಗಲು ವುಚ್ಚಿಕೊಂಡು ಕೂಗಿಕೊಂಡನು : ಅಮೇಲೆ ಅವನ್ನು ಹಿಡಿದುಕೊಂಡು ಹೋದ ನ.

★

ಸಹಸ್ರಚಂದ್ರದರ್ಶನ

ಕಲ್ಕತ್ತಾ— ಹಾಲಿನಿಂದ ತಯಾರಾಗುವ 'ಸಂದೇಶ' ಸಿಹಿತಿಂಡಿಯು ತಯಾರಿಕೆಯನ್ನು ಪ್ರತಿಬಂಧಿಸುವ ವಿಷಯದಲ್ಲಿ ಮೆಂಡಿ ಮಂಡಲದಲ್ಲಿ ಭಾರೀ ವಾಗ್ವಾದವಾಯಿತು : ಕಡೆಗೆ ವಿಧಾಯಿನ ಪಾ ಮುಖ್ಯಮಂತ್ರಿಗಳ ಬೆಂಬಲ ದೊರೆಯಿತು

★

ಎನ್ ಜಿ ಓ

ಜುಂಝುನು— ತನ್ನ ಕೇಳಿಕೆಗೆ ಸರಕಾರ ಮನ್ನಣೆ ಕೊಡದಿದ್ದರೆ, ನೇಗಿ ಕಾರ್ಯಾಚರಣೆಗೆ ಸ್ವೆಹಾರವಲಾಗುವುದೆಂದು ಸಂಘದ ಅಧ್ಯಕ್ಷ ಮಿಷ್ ಮೇರಿ ದೇವಾಸಿಯ ಹೇಳಿದರು

★

ದಂಡಂತ

ಮಂಗಳೂರು— ಬಸ್ಸು ಚೆಕಿಂಗು ಇನ್ಸ್ಪೆಕ್ಟರ್ ಹೆಂಡತಿ ರೂಸಿ ಡಿಸೋಜಾ ಗಂಡಹೆಂಡಿರು ಅಗಲಿಕೆಯಿಂದ ನೊಂದು ಕಣ್ಣ ಇಬ್ಬರು ಗಂಡುಮಕ್ಕಳೆಡನೆ ಭಾವಿಗೆ ಬಿದ್ದು ಸತ್ತರು.

★

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪೇಕ್ಷ, ಜ್ಯೋತಿರ್ವಿದ್ವನ್ಮಣಿ
ಪಂಪಕೃಷ್ಣಜೋಯಿಸರಿಂದ

14 ಬುಧವಾರ ಪಾಡ್ಯ ಉತ್ತರಾಷಾಢ

ಬೇಬಿ ಫುಡ್ ಮಾಯ

ಮದರಾಸು— ಬೇಬಿ ಫುಡ್ಡಿನ ಹಂಚಿಕೆ ಮತ್ತು ಬಿಕರಿ ಬಗ್ಗೆ ಅನಾಪಚಾರಿಕ ರೇಷನಿಂಗನ್ನು ಅಗಸ್ಟಿನಿಂದ ಜಾರಿಗೆ ತರುವುದಾಗಿ ಕಲೆಕ್ಟರು ಏರ್ಪಡಿಸುತ್ತಿರುವುದರ ಪರಿಣಾಮವಾಗಿ ಮೂರುಕಟ್ಟೆಗಳಲ್ಲಿ ಬೇಬಿ ಫುಡ್ ಮಾಯವಾಗಿದೆ.

★

ಬೆಂಗಳೂರಿಗೆ ನೀರು

ಬೆಂಗಳೂರು— ಚೇಂಬರ್ ಆಫ್ ಕಾಮರ್ಸಿನಲ್ಲಿ ನಿನ್ನೆ ನಡೆದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಮಾಜಿ ಮುಂತ್ರಿ ಶ್ರೀ ಸುಬ್ರಹ್ಮಣ್ಯಂ, ಬೆಂಗಳೂರಿಗೆ 28 ಕೋಟಿ ರೂಗಳ ಕಾವೇರಿ ನೀರಿನ ಯೋಜನೆಗಿಂತ ಹಳ್ಳಿವಾಲಾ ಪ್ರಾಜೆಕ್ಟಿನಿಂದ ನೀರು ಸಂಬರಾಜು ಉತ್ತಮವೆಂದೂ ಲಾಭಕರ ಕಡಮೆಯೆಂದೂ ಹೇಳಿದರು — ಏಪ್ರಿಲ್ಲಿಂದ ಯೆಜ್ಜಿಸಿರುವ ನೀರಿನ ದರವನ್ನು ಪ್ರತಿಭಟಿಸಿ ಹಿಂದಿನ ದರವೇ ಜಾರಿಗೆ ಬರುವಂತೆ ನಿರ್ಣಯಿಸಲಾಯಿತು

★

ಭತ್ತ, ಅಕ್ಕಿ ವಶ

ತೀರ್ಥಹಳ್ಳಿ— ಸಿ ಐ ಡಿ ಯವರು ಈಚೆಗೆ ಸ್ಥಳೀಯ ಗೋಡೌನುಗಳು ಅಂಗಡಿಗಳು ಮತ್ತು ಮಿಲ್ಲುಗಳ ಮೇಲೆ ಧಾಳಿ ನಡೆಸಿ 650 ಕ್ವಿಂಟಲು ಭತ್ತ, ಅಕ್ಕಿ ವಶಪಡಿಸಿಕೊಂಡರು.

★

ಯೋಜನೆಯಲ್ಲಿ ಖೋತಾ

ನವದೆಹಲಿ— 4 ನೇ ಯೋಜನೆಗೆ ಮಧ್ಯ ಪ್ರದೇಶ ನಿಶ್ಚಯಿಸಿಕೊಂಡಿರುವ 800 ಕೋಟಿ ರೂಗಳನ್ನು ಕಡಮೆ ಮಾಡಲು ಪ್ಲಾನಿಂಗು ಕಮಿಷನ್ನು ತಿಳಿಸಿದೆ.

★

ನೂತನ ಅಂಚೇಚೀಟಿ

ನವದೆಹಲಿ— ಭಾರತ ಎವರೆಸ್ಟು ಎಕ್ಸ್ಪೆಡಿಷನ್ನಿನ ವಿಜಯಕ್ಕಾಗಿ ಆಗಸ್ಟು 15 ರಂದು ಅಂಚೇಚೀಟಿ ಹೊರಡಿಸಲಾಗುವುದು

ವಿಶ್ವ ಶಾಂತಿ ಸಮಿತಿ

ಅ

ರಷ್ಯಾ, ಭಾರತ ಹಲವು ಇತರ ನಿಯೋಗಗಳ

ಸಭಾ ಪರಿತ್ಯಾಗ

ಶ

ಹೆಲಿಸಿಂಕಿ— ವಿಶ್ವ ಶಾಂತಿ ಸಮಿತಿ ಕಾಂಗ್ರೆಸ್ಸು ಕಮಿಟಿಯು ವಿಯಟ್ನಾಂಗಿನಲ್ಲಿ ಅಲ್ಬಿನಿಯವು ರಷ್ಯವನ್ನು ಕುರಿತು ಅಮೆರಿಕಾದೊಡನೆ ಮೈತ್ರಿಗೆ ಹವಣಿಸುತ್ತಿದೆ' ಎಂದು ಆಪಾದಿಸಿದ್ದಕ್ಕೆ ಪ್ರತಿಭಟಿಸಿ ರಷ್ಯಾ, ಭಾರತ ಮತ್ತು ಹಲವು ನಿಯೋಗಗಳು ಸಭಾಪರಿತ್ಯಾಗ ಘೋಷಿಸಿದವು — ಸಭಾ ಪರಿತ್ಯಾಗಕ್ಕೆ ಮುಂಚೆ ರಷ್ಯಾ ನಾಯಕರು 'ಇದು ಸರ್ಕಸ್ ಅಲ್ಲ' ಎಂದು ಹೇಳಿದರು.

★

ಸತ್ತು ಬದುಕಿದ್ದು !

ನೇಪಲ್ಸ್— ಒಂದು ವರ್ಷದ ಮಗು ಸೊಳ್ಳೆಕಾಟದಿಂದ ಮೃತಪಟ್ಟಿತು ; ಕೃತಕ ಉಸಿರಾಟ, ಹೃದಯ ಒತ್ತುಕೆ ಮೊದಲಾದ ಯಾವುದರಿಂದಲೂ ಪ್ರಯೋಜನವಾಗದಿರಲು ತೀರ ಕಣ್ಣಾಗಿರುವ ಪರಿಸ್ಥಿತಿಯಲ್ಲಿ ಮಗುವನ್ನಿಡಲು ಹೃದಯ ಚಲನೆ ಪ್ರಾರಂಭವಾಗಿ ಮಗು ಬದುಕಿಕೊಂಡಿತು !

★

ನನ್ನ ಗ್ರಾಮ, ನನ್ನ ಪ್ರಾಂತ್ಯ

ಅವರಾವತಿ— ನನ್ನ ಗ್ರಾಮ, ನನ್ನ ಪ್ರಾಂತ್ಯ ಎನ್ನುವುದು ಹಳೇ ಕಾಲದ ಮಾತಾಯಿತೆಂದರು ಆಚಾರ್ಯ ಭಾವೆಯವರು — ಇಂದು ಸಾವಿರಾರು ಮೈಲಿಗಳ ದೂರದಿಂದ ಕ್ಷಿಪಣಿಗಳ ಮೂಲಕ ಪರಾಷ್ಟ್ರಗಳನ್ನೇ ನಾಶಮಾಡಬಹುದಾಗಿದೆ ಎಂದರು — ಅಣು ಯುದ್ಧದಲ್ಲಿ ಪರಾಷ್ಟ್ರಗಳೇ ನಿರ್ನಾಮಗೊಳ್ಳುವ ಪರಿಸ್ಥಿತಿಯಲ್ಲಿ, ನನ್ನ ಗ್ರಾಮ, ನನ್ನ ಪ್ರಾಂತ್ಯ ಎಂದು ಮಾತಾಡುವುದರಲ್ಲಿ ಅರ್ಥವಿಲ್ಲ ಎಂದೂ ಹೇಳಿದರು.

ಕಷ್ಟ ಪರಿಸ್ಥಿತಿ

ಕಡೂರು— ತಾತ್ಕಾಲಿಕ ಮಳೆಯಿಲ್ಲದೆ ಕಾವೇರಿಕ್ಕೀಡಾಗಿರುವ ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಜಿಲ್ಲಾಧಿಕಾರಿಗಳು ಪ್ರವಾಸ ಮಾಡಿ ಕೂಡಲೇ ಪರಿಹಾರ ಕಾರ್ಯಕ್ಕೆ ಆಜ್ಞೆ ಮಾಡಿದರು — ದೇವನೂರು, ನಿಡಘಟ್ಟ, ಸಖರಾಯಪಟ್ಟಣ ಗ್ರಾಮಗಳಲ್ಲಿ ಜನ ಮತ್ತು ದನಗಳಿಗೆ ಕುಡಿಯುವುದಕ್ಕೂ ನೀರಿಲ್ಲವಾಗಿದೆ — ಕಡೂರು ತಾಲ್ಲೂಕಿನ ಎಂಡು ಕಣ್ಣಾಗಳೆಂದು ಹೇಳಲಾಗಿರುವ ಮಾದಗಡ ಮತ್ತು ಅಯ್ಯನ ಕೆರೆಗಳು ಒಣಗಿಹೋಗಿವೆ; ಈ ಪ್ರತಿ ಕೆರೆಗಳೂ 5000 ಎಕ್ರೆಗೆ ನೀರು ಒದಗಿಸುತ್ತಿದ್ದವು.

★

ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ

ಬೆಂಗಳೂರು— ನಿನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ 62 ನೇ ಜನ್ಮದಿನದಂದು ಅವರಿಗೆ 62 ಸಾವಿರ ರೂಗಳ ಚೆಕ್ಕು ಅರ್ಪಿಸಲಾಯಿತು — ಆ ಹಣವನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಉದಾರಾದಾನ ನೀಡಿ, ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರು ಡಾ || ಲೋರಿಯಾರಂವಂಗೆ ಕೊಟ್ಟರು ||

★

ಕದನ ಒಪ್ಪಂದ

ನವದೆಹಲಿ— ರಾಣ್'ನಲ್ಲಿ ಪಾಕಿಸ್ತಾನದ ಹಕ್ಕಿನ ಬಗ್ಗೆ ನ್ಯಾಯನಿರ್ಣಯಕ್ಕೆ ಹಾಕಿರುವುದರ ವಿವೇಕದ ಬಗ್ಗೆ ಪಾರ್ಲಿಮೆಂಟರಿ ಕಾಂಗ್ರೆಸ್ಸು ಪಾರ್ಟಿ ಕಾರ್ಯಕಾರಿ ಸಮಿತಿಯಲ್ಲಿ ಪಾರ್ಟಿಯ ಹಿರಿಯ ಸದಸ್ಯರು ಪ್ರಶ್ನಿಸಿದರು.

ಕ್ರಿ. ಶ. 3000 ದಲ್ಲಿ ನೀವು ಹೇಗೆರುತ್ತೀರಿ ?

ತಾಯಿ ಭೂಲೋಕದಲ್ಲಿ, ಅತ್ತೆಯವನೆ ಚಂದ್ರಲೋಕದಲ್ಲಿದ್ದಾಗ ಇದ್ದೀತು !

★

ಮ್ಯೂನಿಚ್ (ಡಾಡ್)— ಬೆಂಗಳೂರಿನ ಒಂದು ಹೆಣ್ಣನ್ನು ಕೇವಲ 300 ಮಲಗಳ ದೂರದ ಮಧ್ಯಾಸಿಗೆ ಕೊಟ್ಟು ನಾಲು ಜನರೆದುರಿಗೆ ನಿಟ್ಟಿಸಿರು ಬಿಟ್ಟು ಕಣ್ಣಗಲದ ನೀರು ತಂದುಕೊಂಡು ' ಗಂಡನ ಮನೆ ಬಲು ದೂರ ; ಬೇಕೂಂದಾ ನೋಡೋಕಾಗುತ್ತೆ ? ಎಂದು ಹಲುಬುವ ಅನೇಕ ತಾಯಿತಂದೆಗಳನ್ನು ನಾವು ನೋಡಬಹುದು : ಅವು ವೇಗದಲ್ಲಿ ಸಾಗುವ ಸಾರಿಗೆ ಸಂಪರ್ಕಗಳಿದ್ದರೆ ಹಾಗೆ ಹಲುಬುವುದಲ್ಲಿ ಅರ್ಥವಿರಲಿಲ್ಲ ಎನ್ನಿ ; ಆದರೆ ಕ್ಷಣದಲ್ಲಿ ಕಣ್ಣಿಪೆ ಮುಚ್ಚಿ ತೆಗೆಯುವುದರೊಳಗೆ ಸಹಸ್ರಾರು ಮೈಲಿಗಳನ್ನು ಅತ್ಯುಗ್ರ ವೇಗದಿಂದ ದಾಟಿ ಕ್ರಮಿಸುವ ಕ್ಷಿಪಣಿಗಳನ್ನು ಕಂಡುಹಿಡಿದಿರುವ ಈ ಕಾಲದಲ್ಲಿ ಬೆಂಗಳೂರು ಮತ್ತು ರಾಷ್ಟ್ರಗಳೇನು ? ಭೂಲೋಕದಲ್ಲಿ ತವರುಮನೆಯಿರುವ ಒಬ್ಬ ಹೆಣ್ಣು ಮಗಳು ಚಂದ್ರಲೋಕದಲ್ಲಿ ಯಾವುದೋ ಕಂಪೆನಿಯಲ್ಲಿ ಮ್ಯಾನೇಜರು ಕೆಲಸದಲ್ಲಿರುವ ಒಂದು ಗಂಡನ್ನು ಮೋಹಿಸಿ, ಚಂದ್ರಲೋಕದಲ್ಲಿಯೇ ಮಧುಚಂದ್ರವನ್ನು ಅನುಭವಿಸಬೇಕೆಂದಾತಿಸಿ, ಅದು ಮುಗಿದೊಡನೆ ಅತ್ತೆ ತವರಿಗೆ ಬಂದು, ದಿಂಗಳ ನಾಗೂಲೆ (ಅವುಗಳಲ್ಲೆಲ್ಲಾ ನಂಬಿಕೆಯಿದ್ದರೆ !) ಮುರಿತಾದ ಶಾಸ್ತ್ರಗಳನ್ನು ಮುಗಿಸಿಕೊಂಡು ಬಂದೇಡು ದಿನಗಳಲ್ಲಿ ಗಂಡನ ರಜೆ ತೀರುವುದರೊಳಗೆ ಚಂದ್ರಲೋಕಕ್ಕೆ ಹಿಂದಿರುಗಿದಳೆಂದು ಯಾರಾದರೂ ಹೇಳಿದರೂ ಆಶ್ಚರ್ಯಪಡಬೇಕಾದ್ದೇನೂ ಇಲ್ಲ !

ಇನ್ನೂ ಅಂತಹ ಕಾಲ ಬಂದಿಲ್ಲ, ನಿಜ : ಆದರೆ .... ಬಂದಾಗ .... ಬಂದರೆ .... ಬಂದೇಬಿಟ್ಟಿತೆಂದರೆ.....? — ಈ ರೀತಿಯ ಪ್ರಶ್ನೆಗಳು ಯಾರಲ್ಲೂ ಉದಿಸಬಹುದಾದಂತಹವು ; ಅಂತೆಯೆ ಕ್ರಿ ಶ 3000 ದಲ್ಲಿ ಮನುಷ್ಯ ಹೇಗಿರುತ್ತಾನೆ ಎಂಬ ವಿಷಯವನ್ನು ಆಧಾರವಾಗಿಟ್ಟುಕೊಂಡ ಪಶ್ಚಿಮ ಜರ್ಮನಿಯಲ್ಲಿ ಟೆಲಿವಿಜನ್ನ ಚಿತ್ರವೊಂದನ್ನ ತೆಗೆಯಲಾಯಿತು ; ಅಂತರಿಕ್ಷ ನೌಕೆ ' ಔರಿಯನ್ ' ನ ಅದ್ಭುತ ಅನುಭವಗಳು ಎಂಬ ಹೆಸರಿನ ಈ ಚಿತ್ರವನ್ನು ಮ್ಯೂನಿಚ್ಚಿನಲ್ಲಿ ನಿರ್ಮಿಸಲಾಗಿದ್ದು ಅದಕ್ಕೆ ನಾಲ್ವತ್ತೆಂಡೂವರೆ ಲಕ್ಷ ರೂಗಳು ವೆಚ್ಚವಾಯಿತು ; ಇದರ ಕಾಗಿ 450 ಅಡಿ ಒಳಸುತ್ತಳತೆಯ 96 ಅಡಿ ಎತ್ತರದ ಬ್ರಹ್ಮಾಂಡಾಕಾರದ ಅಂತರಿಕ್ಷ ನೌಕೆಯ ' ಸೆಟ್ ' ಅನ್ನು ನಿರ್ಮಿಸಲಾಗಿತ್ತು : ಅದರಲ್ಲಿ ಈ ಚಿತ್ರಕ್ಕೆ ಬೇಕಾದ ಎಲ್ಲ ದೃಶ್ಯಗಳನ್ನೂ ಚಿತ್ರಿಸಿಕೊಳ್ಳಲಾಯಿತು (ಯೂ ಪಿ ಎಸ್)

ಗೋರಕ್ಷಣೆಗೆ ಪ್ರಾಣದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಸಹಾಯಾರ್ಥ ಪ್ರದರ್ಶನ ! ನೋಡಲು ಮರೆಯಬೇಡಿ !

ಚಿತ್ರಾಲಯ ಮಿತ್ರಮಂಡಲಿ, ಮೈಸೂರು

.... ಒಡ ಹಡುಗಿಯ ಮದುವೆಯ ಸಹಾಯಾರ್ಥಕ್ಕಾಗಿ ....

ತಾ|| 18-7-65 ನೇ ಭಾನುವಾರ ಸಂಜೆ 6-30 ಕ್ಕೆ

ಮೈಸೂರು ಟೌನ್ ಹಾಲ್‌ನಲ್ಲಿ

ಶ್ರೀ ಬಿ. ಎನ್. ಕೆಂಗೇಗೌಡ, ಬಿ ಎ, ಬಿ ಎಲ್; ಇವರ ಘನ ಅಧ್ಯಕ್ಷತೆಯಲ್ಲಿ

**** ಹರಿದ್ರಾ ಕುಂಕುಮ ****

ಎಂಬ ನಿತ್ಯನೂತನ ಹಾಸ್ಯಭರಿತ ಸಾಮಾಜಿಕ ನಾಟಕವು ಅಭಿನಯಿಸಲ್ಪಡುವುದು

ಕಲಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ವಿನಂತಿ.

ವುಡ್‌ಲ್ಯಾಂಡ್ಸ್ - ದಿಗ್ವಿಜಯ 8 ನೇ ವಾರ

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವೀರಾಜ್, ರಾಜೇಂದ್ರನಾಥ್ ಅಭಿನಯಿಸಿರುವ

ಜಾನ್ವರ್ JANWAR

ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು,
ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮೆನ್ ಕಲರ್ ಹಿಂದಿ ಚಿತ್ರ

ಆಪೆರ— ಜನಪ್ರಿಯ 3 ನೇ ವಾರ

ಪೂರ್ಣಾಂಕ್ ಥಿಯೇಟರ್ಸ್‌ರವರ 100 ನೇ ಅಮೋಘ ತಮಿಳು ಚಿತ್ರ

ವಲವನಕು ವಲವ

ನಟವರ್ಗ— ಜವಿನಿ ಗಣೇಶ್, ಸಾವಿತ್ರಿ, ಅಶೋಕ್, ಶಂಗವೇಲು
ಮುತ್ತುಲಕ್ಷ್ಮಿ, ಮನೋರಂಮ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ

Help The GORAKSHANA

.... ಗೋರಕ್ಷಣೆಗೆ ಬೆಂಬಲ ನೀಡಿ ....

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣದಯೆ, ಶಾಖಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದ 50 ನೈಪೆ
ಸಹಾಯಿಗರು ರೂ 10 ಮತ್ತು ಬೆಂಬಲಿಗರು ರೂ 25(ಒಂದು ಸಾರಿಯಾದರೂ) :

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ ಮೈಸೂರು 4

Edited, Printed & Published by Dharma prachara nirathe M S Krisbna Rao) Proprietor) at the Satyavadi Press Chamarajapuram, Mysore 4